
ಕರ್ನಾಟಕ ವಿಧಾನ ಪರಿಷತ್ತು
ನೂತನ ಶಾಸಕರುಗಳ


ಕರ್ನಾಟಕ ವಿಧಾನ ಪರಿಷತ್ತು
ನೂತನ ಶಾಸಕರುಗಳ

ದಿನಾಂಕ: 24-06-2024 ರಂದು ರಾಜ್ಯ ವಿಧಾನಸಭೆಯಿಂದ ಮೇಲ್ಮನೆಗೆ ಆಯ್ಕೆಯಾಗಿರುವ 11ಮಂದಿ ಹಾಗೂ ಶಿಕ್ಷಕ ಮತ್ತು ಪದವಿಧರ ಕ್ಷೇತ್ರಗಳಿಂದ ಚುನಾಯಿತರಾಗಿರುವ 06 ಮಂದಿ ಸೇರಿ ಒಟ್ಟು 17 ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್ ಹೊರಟ್ಟಿ, ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಎಚ್.ಕೆ ಪಾಟೀಲ್ ಉಪಸ್ಥಿತರಿದ್ದರು.

ವಿಧಾನಸಭೆಯಿಂದ ಆಯ್ಕೆಯಾಗಿರುವ ಶ್ರೀ ಐವಾನ್ ಡಿಸೋಜ, ಶ್ರೀ ಕೆ.ಗೋವಿಂದರಾಜು, ಶ್ರೀ ಜಗದೇವ ಗುತ್ತೇದಾರ್, ಶ್ರೀಮತಿ ಬಲ್ಕೀಸ್‌ಬಾನು, ಶ್ರೀ ಎನ್ ಎಸ್.ಬೋಸರಾಜು , ಡಾ.ಯತೀಂದ್ರ, ಶ್ರೀ ವಸಂತಕುಮಾರ, ಶ್ರೀ ಮಾರುತಿ ರಾವ್ ಮುಳೆ, ಶ್ರೀ ಟಿ.ಎನ್ ಜವರಾಯಿಗೌಡ, ಶ್ರೀ ಸಿ.ಟಿ.ರವಿ ಮತ್ತು ಶ್ರೀ ಎನ್ ರವಿಕುಮಾರ್ ಅವರು ಪ್ರಮಾಣ ವಚನ ಸ್ವೀಕರಿಸಿದರು.

ಶಿಕ್ಷಕರ ಮತ್ತು ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಚುನಾಯಿತರಾಗಿರುವ ಶ್ರೀ ಚಂದ್ರಶೇಖರ ಪಾಟೀಲ, ಶ್ರೀ ಬಸವರಾಜ, ಡಾ.ಧನಂಜಯ್ ಸರ್ಜಿ, ಶ್ರೀ ರಾಮೋಜಿಗೌಡ, ಶ್ರೀ ಎಸ್.ಎಲ್ ಭೋಜೇಗೌಡ, ಶ್ರೀ ಕೆ.ವಿವೇಕಾನಂದ ಹಾಗೂ ಶ್ರೀ ಡಿ.ಟಿ ಶ್ರೀನಿವಾಸ ಅವರು ನೂತನ ಸದಸ್ಯರಾಗಿ ಪ್ರಮಾಣ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಹಲವಾರು ಸಚಿವರು, ಶಾಸಕರು, ವಿಧಾನ ಪರಿಷತ್ ಸದಸ್ಯರು,ಗಣ್ಯಮಾನ್ಯರು ನೂತನವಾಗಿ ಆಯ್ಕೆಯಾದ ವಿಧಾನ ಪರಿಷತ್ ಸದಸ್ಯರ ಅಭಿಮಾನಿಗಳು ಕುಟುಂಬ ವರ್ಗದವರು ಹಿರಿಯ ಅಧಿಕಾರಿಗಳು ವಿಧಾನ ಪರಿಷತ್ತಿನ ಸಿಬ್ಬಂದಿ ವರ್ಗದವರು ಮುಂತಾದವರು ಉಪಸ್ಥಿತರಿದ್ದರು.

******